ಶರಣ್ಯ ಈ ಸೇವೆಯನ್ನು ಕೆಲವು ಪ್ರಮುಖ ಆದ್ಯತೆಗಳೊಂದಿಗೆ ಕಾರ್ಯನಿರ್ವಹಿಸುತ್ತದೆ.

★ ರೋಗಿಯು ತನ್ನ ಆರೋಗ್ಯದ ಉಲ್ಬಣತೆಯ ಪರಿಸ್ಥಿತಿಯನ್ನು ಅರಿತು , ರೋಗವನ್ನು ಮೀರಿ ಎದುರಿಸುವ ಮಾನಸಿಕ ಧೈರ್ಯವನ್ನು ಪಡೆಯುವ ಪ್ರಯತ್ನ.

★ ರೋಗಿಯ ಉಳಿದ ದಿನಗಳು ಗೌರವಯುತವಾಗಿ, ಪ್ರೀತಿವಾತ್ಸಲ್ಯದ ಪರಿಸರದಲ್ಲಿ, ಉತ್ತಮ ಗುಣಮಟ್ಟದ ಜಿವನ ಕ್ರಮವನ್ನು ನೀಡುವ ಪ್ರಯತ್ನ.

★ ರೋಗಿಯು ಸ್ವಲ್ಪ ಸಮಯದ ನಂತರ ಕ್ಷಿಣಿಸುತ್ತಾ ಹೋಗುವ ಬಗ್ಗೆ ಸಾಮಾನ್ಯ ತಿಳುವಳಿಕೆ ಮತ್ತು ಮುನ್ಸೂಚನೆಗಳ ಅರಿವು ನೀಡುವಲ್ಲಿ ಪ್ರಯತ್ನ ಪಡುವುದು.

**ಪ್ರಾರ್ಥಿಸುವ ತುಟಿಗಳಿಗಿಂತ ಸೇವೆ ಮಾಡುವ ಕೈಗಳೇ ಮುಖ್ಯ**

## ◆ ಸೇವಾ ವಿಧಾನ ಮತ್ತು ಸಂರಕ್ಷಣೆ :

ಇದುವರೆಗೆ ತಿಳಿಸಿದಂತೆ ಶಿವಮೊಗ್ಗ ಮತ್ತು ಅಸುಪಾಸಿನ ಪ್ರದೇಶಗಳಿಗೆ ಸೇವೆ ನೀಡುತ್ತಿದ್ದ ಶರಣ್ಯ ಸಂಸ್ಥೆಯು, ತನ್ನ ಸೇವಾ ವ್ಯಪ್ತಿಯನ್ನು ವಿಸ್ತರಿಸುವ ದೃಷ್ಟಿಯಿಂದ ಶಿವಮೊಗ್ಗ ನಗರದಿಂದ 10.00 ಕಿ.ಮೀ. ದೂರದಲ್ಲಿ ಸುಮಾರು 10.5 ಎಕರೆ ಪ್ರದೇಶವನ್ನು ಖರೀದಿಸಿ, ಬೃಹತ್ ಆರೈಕೆ ಕೇಂದ್ರವನ್ನು ನಿರ್ಮಿಸುವ ಸಂಕಲ್ಪ ಮಾಡಿದೆ. ಪ್ರಾಥಮಿಕ ಹಂತದಲ್ಲಿ 20 ರೋಗಿಗಳಿಗೆ ಆಶ್ರಯ ನೀಡುವ ವಾರ್ಡ್ ಮತ್ತು ಇತರೆ ಸೌಲಭ್ಯಗಳೊಂದಿಗೆ ಕಳೆದ ಎರಡು ವರ್ಷಗಳಿಂದ ಸೇವೆ ಸಲ್ಲಿಸಲಾಗುತ್ತಿದೆ.

ಈ ಸೇವೆಯ ಒಂದೊಂದು ಹೆಜ್ಜೆಯು ಬಹಳ ಜವಾಬ್ದಾರಿಯುತವಾಗಿದ್ದು, ಆಶ್ರಯದ ವಾಡ್‌ಗಳು, ಉಟೋಪಚಾರ, ಶುಶ್ರೂಷೆ, ವೈದ್ಯಕೀಯ ಸೌಲಭ್ಯ ಇತರೆ ಸೌಲಭ್ಯಗಳ ವ್ಯವಸ್ಥೆ, ಪೂರಕವಾಗಿ ಅಹ್ಲಾದಕರ ವಾತವರಣ ಸಿಬ್ಬಂದಿಗಳು ಮತ್ತು ಇತರೆ ಖರ್ಚು ವೆಚ್ಚಗಳು . ಬಹಳ ಮುಖ್ಯವಾಗಿ ಈ ಸೇವೆಯನ್ನು , ಸೇವೆಯಂದೇ ಪರಿಗಣಿಸಿ ವ್ಯವಹಾರಿಕವಾಗಬಾರದೆಂದು ಇದನ್ನು ಉಚಿತವಾಗಿ ನೀಡುವ ನಿರ್ಧಾರದಂತೆ ಮುನ್ನಡೆಯುತ್ತಿದೆ.

ಈ ಸೇವೆಯು ತುಂಬಾ ವಿಶೇಷ ಮತ್ತು ಮಾದರಿಯಾಗಿದೆ. ಶಿವಮೊಗ್ಗೆಯ ಸುಮಾರು ಹತ್ತು ಜಿಲ್ಲೆಗಳಿಗೆ ಇದೊಂದೇ ಈ ರೀತಿಯ ಆರೈಕೆ ನೀಡುವ ಕೇಂದ್ರವಾಗಿದೆ. ಒಳರೋಗಿಗಳಾಗಿ ಬಂದವರಿಗೆ ಪ್ರಾಥಮಿಕವಾಗಿ ವೈದ್ಯಕೀಯ ಆರೈಕೆ ನೀಡಿ ರೋಗಿಯ ಉಲ್ಬಣತೆಯ ನರಳುವಿಕೆ, ಸಂಕಟ ಮತ್ತು ನೋವು ಇತ್ಯಾದಿಗಳ ಅಡ್ಡಪರಿಣಾಮಗಳ ತೊಂದರೆಯನ್ನು ಕಡಿಮೆಗೊಳಿಸುವ ಪ್ರಯತ್ನಮಾಡಲಾಗುವುದು. ನಂತರ ಆಪ್ತಸಮಾಲೋಚನೆ, ಸಾಮಾಜಿಕ ಆರೈಕೆಯ ವಿಧಾನಗಳು, ಧಾರ್ಮಿಕ ಶುಶ್ರೂಷೆ ಮತ್ತು ಮಾನಸಿಕ ಆರೈಕೆಯನ್ನು ನೋಡಿ ರೋಗಿ ತನ್ನ ಪರಿಸ್ಥಿತಿಯನ್ನು ಒಪ್ಪಿಕೊಂಡು ರೋಗದ ಜೋತೆ ಜೀವಿಸುವುದನ್ನು ತಿಳಿಹೇಳುವ ಪ್ರಯತ್ನ ಮಾಡಲಾಗುತ್ತದೆ.

ಈ ಎಲ್ಲಾ ಸೇವೆಯ ಪ್ರಯತ್ನವೇ ...

★ ರೋಗಿಯ ಗೌರವಯುತ ಬದುಕು. ★ ನೋವುರಹಿತ ದಿನಗಳು . ★ ಗುಣಮಟ್ಟದ ಜೀವನ. ★ ಆಧ್ಯಾತ್ಮಿಕ ಚಿಂತನೆ. ★ ನಿರ್ಭಯ ಮಾನಸಿಕ ಸ್ಥಿತಿ.





**ಮುನ್ನುಡಿ :**

ಶರಣ್ಯ ಸಂಸ್ಥೆಯು ಡಿ.ಎಸ್.ಎಲ್.ಟ್ರಸ್ಟ್(ರಿ.) ನ ಒಂದು ಸರ್ಕಾರೇತರ ಸೇವಾ ಸಂಸ್ಥೆ . ಈ ಸಂಸ್ಥೆಯು ಕರ್ನಾಟಕ ರಾಜ್ಯದ ಶಿವಮೊಗ್ಗದಲ್ಲಿ ಸ್ಥಾಪಿಸಲ್ಪಟ್ಟಿದೆ. ಉಲ್ಬಣ ಸ್ಥಿತಿಯಲ್ಲಿರುವ ಹಲವಾರು ಗಂಭಿರ ರೋಗಪಿಡಿತರಾಗಿರುವ, ಅಲ್ಪಾವಧಿಯ ಸಾವಿನಂಚಿನಲ್ಲಿರುವವರಿಗೆ ಆರೈಕೆ ನೀಡುವ ಸೇವೆಯಲ್ಲಿ ನಿರತವಾಗಿದೆ. (ಕ್ಯಾನ್ಸರ್, ಸಂಪೂರ್ಣ ಪ್ಯಾರಾಲಿಸಿಸ್, ನರ ರೋಗಗಳು, ಮೆದುಳು ನಿಷ್ಕ್ರಿಯತೆ ಮತ್ತು ಇತರೆ ಗಂಭಿರ ಕಾಯಿಲೆಗಳು ಇತ್ಯಾದಿ) ಈ ಸೇವೆಯನ್ನು ಕಳೆದ 14 ವರ್ಷಗಳಿಂದ ಹಂತ ಹಂತವಾದ ಆನುಭವದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ರೋಗಿಗಳಿಗೆ ಆಪ್ತಸಮಾಲೋಚನೆ, ಸಾಂತ್ವಾನ ನೀಡುವುದು, ವೈದ್ಯರು ಮತ್ತು ಶುಶ್ರೂಷಕಿ ಯರ ತಂಡದೊಂದಿಗೆ ಉಲ್ಬಣಿಸಿದ ರೋಗಿಗಳ ಮನೆಗೆ ತೆರಳಿ ಶುಶ್ರೂಷೆ ಮತ್ತು ಆರೈಕೆ ನೀಡುತ್ತಾ ರೋಗಿಗಳ ಸೇವೆಯಲ್ಲಿ ಶಿವಮೊಗ್ಗ ಮತ್ತು ಹತ್ತಿರದ ಗ್ರಾಮಾಂತರ ಪ್ರದೇಶದಲ್ಲಿರುವ ರೋಗಿಗಳಿಗೆ ಸೇವೆ ನೀಡುತ್ತಾ ದಾಪುಗಾಲಿಟ್ಟು ಈಗ ಪ್ರಸ್ತುತ ಸುಸಜ್ಜಿತವಾದ ಆರೈಕೆ ಕೇಂದ್ರದಲ್ಲಿ ರೋಗಿಗಳಿಗೆ ಆಶ್ರಯ ನೀಡಿ ಸೇವೆಸಲ್ಲಿಸುವಲ್ಲಿ ಮುಂದೆಸಾಗಿರುತ್ತೇವೆ.




**ಒಂದು ಅವಲೋಕನ :**

ಕೇಂದ್ರ ಸರ್ಕಾರದ ಇತ್ತೀಚಿನ ಒಂದು ಸಮೀಕ್ಷೆಯ ಮಾಹಿತಿ ಪ್ರಕಾರ ಇನ್ನಾವುದೇ ಚಿಕಿತ್ಸೆಯು ಫಲಕಾರಿಯಾಗದೆ, ಉಲ್ಬಣ ಸ್ಥಿತಿಯನ್ನು ತಲುಪಿ ಅಂತಿಮ ದಿನಗಳನ್ನು ಎಣಿಸುತ್ತಿರುವ ರೋಗಿಗಳ ಪ್ರಮಾಣ ಪ್ರತಿಶತ ಎರಡಕ್ಕಿಂತ ಹೆಚ್ಚಾಗುತ್ತಿದೆ ಎಂದು ತಿಳಿಸುತ್ತದೆ.

ಇಂತಹ ಪರಿಸ್ಥಿತಿಯ ಹಂತ ತಲುಪಲು ನಾನ ಕಾರಣಗಳಿರಬಹುದು ಉದಾಹರಣೆಗೆ ಮುಗ್ಧತೆ, ನಿರ್ಲಕ್ಷ, ಆರ್ಥಿಕ ತೊಂದರೆ, ಸಾಮಾಜಿಕ ಪರಿಸ್ಥಿತಿ, ರೋಗಿಯ ವರ್ತನೆ – ಸ್ವಭಾವ, ವೈದ್ಯಕೀಯ ಸೌಲಭ್ಯದ ಕೊರತೆ ಇತ್ಯಾದಿ.

ಇವೆಲ್ಲದರ ಪರಿಣಾಮ ರೋಗಿ ಗುಣಪಡಿಸಲಾಗದ ಉಲ್ಬಣಾವಸ್ಥೆಗೆ ತಲುಪುವುದು ಮತ್ತು ನೋವು – ಸಂಕಟ, ನರಳುವಿಕೆಯ ಅನುಭವ, ಮಾನಸಿಕ ಹಿಂಸೆ ಇತ್ಯಾದಿ. ಅತಿ ಮುಖ್ಯವಾಗಿ ಕುಟುಂಬದ ದೈನಂದಿಕ ಚಟುವಟಿಕೆಯ ಏರು ಪೇರು. ಈ ಪರಿಸ್ಥಿತಿಯನ್ನು ಸುಲಲಿತವಾಗಿ ನಿಭಾಯಿಸುವ ವಿಶೇಷ ವಿಧಾನವೇ ಉಪಶಮನ ಆರೈಕೆ. ಈ ಸೇವೆಯ ಅವಶ್ಯಕತೆ ರಾಷ್ಟ್ರದಾದ್ಯಂತ ಹೆಚ್ಚು ಅವಶ್ಯವಿರುವುದರಿಂದ, ಈಗಿರುವ ಬೆರಳೆಣಿಕೆಯ ಕೇಂದ್ರಗಳಿಗಿಂತ ಹೆಚ್ಚು ಕೇಂದ್ರಗಳು ಈ ಸೇವೆಯನ್ನು ನೀಡುವಂತಾಗಬೇಕಾಗಿದೆ. ಈ ನಿಟ್ಟಿನಲ್ಲಿ ಶರಣ್ಯದ ಸೇವಾ ಚಿಂತನೆ ಹರಿಸಲಾಗಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ.

**ಉದ್ದೇಶ ಮತ್ತು ಗುರಿ :**

ವ್ಯಕ್ತಿಯು ತನ್ನ ಆರೋಗ್ಯದ ಸ್ಥಿತಿಯು ಇನ್ನಾವುದೇ ಚಿಕಿತ್ಸೆಗೆ ಗುಣವಾಗದೆ (ಮುಂಜಾಗ್ರತೆಯ ತಪಾಸಣೆ, ಚಿಕಿತ್ಸೆ ಮತ್ತು ವೈದ್ಯೋಪಚಾರದ ನಂತರವೂ) ಉಲ್ಬಣಾವಸ್ಥೆಗೆ ತಲುಪಿದಾಗ, ಅಂತಹ ರೋಗಿಗಳಿಗೆ ನಿರಂತರವಾದ ವೈದ್ಯಕೀಯ ಆರೈಕೆ, ಸಾಮಾಜಿಕ ಆರೈಕೆ, ಆಧ್ಯಾತ್ಮಿಕ ಆರೈಕೆ ಮತ್ತು ಮಾನಸಿಕ ಆರೈಕೆಯ ಅಗತ್ಯವಿರುತ್ತದೆ.

ಈ ರೀತಿ ಒಟ್ಟಾರೆ ಎಲ್ಲಾ ಆರೈಕೆ ಮತ್ತು ಪ್ರಿತಿ ವಿಶ್ವಾಸವನ್ನು ತೋರಿಸಿ ರೋಗಿಯನ್ನು ನೋಡಿಕೊಳ್ಳುವುದೇ ಉಪಶಮನ ಶುಶ್ರೂಷೆ ಮತ್ತು ಆರೈಕೆ ಎಂದು ಹೇಳಲಾಗುತ್ತದೆ. ಇಂತಹ ಒಂದು ವಿಧಾನದಿಂದ ನೊಂದರೋಗಿಯ ನರಳಾಟವನ್ನು ಕಡಿಮೆ ಗೊಳಿಸಿ ಇನ್ನುಳಿದ ಅವಧಿಯನ್ನು ಶಾಂತಿ ನೆಮ್ಮದಿಯಿಂದಿರಲು ಸಹಕರಿಸುವುದು ಮತ್ತು ಜೀವನದ ಅಂತಿಮ ದಿನಗಳ ಗುಣಮಟ್ಟವನ್ನು ಉತ್ತಮಗೊಳಿಸುವಿಕೆಯೇ ಈ ಸೇವೆಯ ಮೂಲ ಉದ್ದೇಶ.

ಇದರ ಜೊತೆಗೆ ರೋಗಿಯ ಕುಟುಂಬದವರಿಗೆ ಧೈರ್ಯ, ಸಾಂತ್ವಾನ ನೀಡಿ ಪರಿಸ್ಥಿತಿಯನ್ನು ನಿಭಾಯಿಸುವ ಮತ್ತು ಚೈತನ್ಯ ಪಡೆಯುವಲ್ಲಿ ಸಹಕರಿಸುವುದು. ಈ ವಿಧಾನದಿಂದ ಧನಾತ್ಮಕ ಚಿಂತನೆಯೊಂದಿಗೆ ರೋಗಿ ದಿನಕಳೆಯುವಲ್ಲಿ ಸಹಕಾರಿಯಾಗುವದಲ್ಲದೆ , ರೋಗಿಯ ನರಳಿದ ದಿನಗಳು ನೆನಪಾಗಿ ಮಾತ್ರ ಉಳಿಯುವಲ್ಲಿ ಸಹಕರಿಸುವುದು ಇದರ ಮತ್ತೊಂದು ಉದ್ದೇಶವಾಗಿದೆ.

ಈ ಸೇವೆಯು ಬಡವ – ಬಲ್ಲಿದ ನೆಂಬದೆ, ಜಾತಿ – ಧರ್ಮಗಳನ್ನು ಮೀರಿ ಎಲ್ಲ ವರ್ಗದ ಜನರಿಗೆ ಉಚಿತವಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಸೇವೆ ನೀಡುವ ಬೃಹತ್ ಗುರಿಯೊಂದಿಗೆ ಹೆಜ್ಜೆಯನ್ನು ಮುಂದಿಡುತ್ತಿದ್ದೇವೆ. ಈ ಗುರಿಯ ಸಾಧನೆಗೆ ಹೆಚ್ಚು ಜನರ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಅಗತ್ಯವನ್ನು ಅಪೇಕ್ಷಿಸುತ್ತೇವೆ.